**ದಿಃ 27-01-2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರಿದ **ಮುಖ್ಯವಿಚಾರಣೆ ಃ** ಪ್ರತಿ**ವಾದಿ ಪರ** ಶ್ರೀ.ಎ.ಎ **ವಕೀಲರಿಂದ.**

1. ಸಾಕ್ಷಿಯು ಹಾಜರುಪಡಿಸಿರುವ ಬಸಪ್ಪನವರ ಮರಣ ಪ್ರಮಾಣಪತ್ರವನ್ನು ನಿ-ಡಿ-1 ಎಂದು, ಮಣಿಪಾಲ್‌ನ ಕಸ್ತೂರಬಾ ಆಸ್ಪತ್ರೆಯ ಬಿಡುಗಡೆ ಚೀಟಿಯನ್ನು ನಿ-ಡಿ-2 ಎಂದು, ಮೆಗ್ಗಾನ್ ಅಸ್ಪತ್ರೆಯ ಬಸಪ್ಪನವರಿಗೆ ಸಂಬಂಧಿಸಿದ ಎರಡು ರೋಗಿಯ ಸಾರಾಂಶದ ದೃಢೀಕೃತ ನಕಲುಗಳನ್ನು ನಿ-ಡಿ-3 ಮತ್ತು ನಿ-ಡಿ-4 ಎಂದು, ಹೊರರೋಗಿಯ ಚೀಲಟಿಯ ದೃಢೀಕೃತ ನಕಲನ್ನು ನಿ-ಡಿ-5 ಎಂದು, ರೋಗ ವಿವರದ ಹಾಳೆಯ ದೃಢೀಕೃತ ನಕಲನ್ನು ನಿ-ಡಿ-6 ಎಂದು, ಸಾರ್ವಜನಿಕ ಮಾಹಿತಿ ಅಧಿಕಾರಿಯವರು ಕೊಟ್ಟಿರುವ ಬಸಪ್ಪನವರು ಉಪನೊಂದಣಾಧಿಕಾರಿಯವರಿಗೆ ಸಲ್ಲಿಸಿರುವ ಅರ್ಜಿಯ ಪ್ರತಿಯನ್ನು ನಿ-ಡಿ-7 ಎಂದು, ವೈದ್ಯಕೀಯ ಪ್ರಮಾಣಪತ್ರದ ದೃಢೀಕೃತ ನಕಲನ್ನು ನಿ-ಡಿ-8 ಎಂದು, 9 ಆರ್.ಟಿ.ಸಿ ಗಳ ದೃಢೀಕೃತ ನಕಲುಗಳನ್ನು ನಿ-ಡಿ-9 ರಿಂದ ನಿ-ಡಿ-17 ಎಂದು, ಎರಡು ಮ್ಯುಟೇಷನ್ ರಿಜಿಸ್ಟರ್ ಎಕ್ಸಟ್ರಾಕ್ಟಗಳ ದೃಢೀಕೃತ ನಕಲುಗಳನ್ನು ನಿ-ಡಿ-18 ಮತ್ತು ನಿ-ಡಿ-19 ಎಂದು, ಆರ್.ಎ.39/2007-08 ರಲ್ಲಿ ಹಿರಿಯ ಉಪ ವಿಭಾಗಾಧಿಕಾರಿಯವರು ಮಾಡಿರುವ ಆದೇಶದ ದೃಢೀಕೃತ ಪ್ರತಿಯನ್ನು ನಿ-ಡಿ-20 ಎಂದು, ಸದರಿ ಪ್ರಕರಣದಲ್ಲಿ ಸಲ್ಲಿಸಿರುವ ಮೇಲ್ಮನವಿ, ತಕರಾರು ಪತ್ರ, ಹಾಗೂ ಉಭಯ ಪಕ್ಷಗಾರರು ಸಲ್ಲಿಸಿರುವ ಲಿಖಿತ ವಾದ ಮಂಡನೆಯ ದೃಢೀಕೃತ ನಕಲುಗಳನ್ನು ನಿ-ಡಿ-21 ರಿಂದ ನಿ-ಡಿ-24 ಎಂದು, ಪಹಣಿ ಪತ್ರಿಕೆಯ ದೃಢೀಕೃತ ನಕಲನ್ನು ನಿ-ಡಿ-25 ಎಂದು, ಮ್ಯುಟೇಷನ್

ರಿಜಿಸ್ಟರ್‌ನ ದೃಢೀಕೃತ ನಕಲನ್ನು ನಿ-ಡಿ-26 ಎಂದು, ವಂಶ ವೃಕ್ಷದ ದೃಢೀಕೃತ ನಕಲನ್ನು ನಿ-ಡಿ-27 ಎಂದು, ಎರಡು ತೆರಿಗೆ ಪಾವತಿ ರಶೀದಿಗಳನ್ನು ನಿ-ಡಿ-28 ಮತ್ತು ನಿ-ಡಿ-29 ಎಂದು, ದಿ.28.3.2002 ರ ಕ್ರಯಪತ್ರದ ದೃಢೀಕೃತ ನಕಲನ್ನು ನಿ-ಡಿ-30 ಎಂದು, ಅಸಸ್‌ಮೆಂಟ್‌ನ ದೃಢೀಕೃತ ನಕಲನ್ನು ನಿ-ಡಿ-31 ಎಂದು, ದಿ.20.12.2012 ರ ಕ್ರಯದ ಒಪ್ಪಂದದ ಕರಾರು ಪತ್ರದ ದೃಢೀಕೃತ ನಕಲನ್ನು ನಿ-ಡಿ-32 ಎಂದು, ದಿ.18.2.2014 ರ ಕ್ರಯದ ಕರಾರು ಪತ್ರದ ದೃಢೀಕೃತ ನಕಲನ್ನು ನಿ-ಡಿ-33 ಎಂದು, ಪಾಸ್ ಪುಸ್ತಕದ ದೃಢೀಕೃತ ನಕಲನ್ನು ನಿ-ಡಿ-34 ಎಂದು, ಎರಡು ವಿದ್ಯುತ್ ಬಿಲ್ ಪಾವತಿ ರಶೀದಿಗಳನ್ನು ನಿ-ಡಿ-35 ಮತ್ತು ನಿ-ಡಿ-36 ಎಂದು, ಸಾರ್ವಜನಿಕ ಮಾಹಿತಿ ಅಧಿಕಾರಿಯವರು ಕೊಟ್ಟಿರುವ ಹಿಂಬರಹವನ್ನು ನಿ-ಡಿ-37 ಎಂದು, ಸದರಿ ಅಧಿಕಾರಿಯವರು ದಿ.17.6.2015 ರಂದು ಮಾಡಿರುವ ಆದೇಶದ ದೃಢೀಕೃತ ನಕಲನ್ನು ನಿ-ಡಿ-38 ಎಂದು, ತರೀಕೆರೆ ವಲಯದ ಅಬಕಾರಿ ಇನ್ಸಪೆಕ್ಟರ್ ರವರು ಕೊಟ್ಟಿರುವ ಬಿ.ಎಲ್.ಸಿ ಮೊಖದ್ದಮೆಗಳ ಹಿಂಬರಹವನ್ನು ನಿ-ಡಿ-39 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ
ಪ್ರ.ದ.ನ್ಯಾ.ದಂ. ರವರು, ತರೀಕೆರೆ.